# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಪ್ರೋತ್ಸಾಹ ಧನ, ಸಹಾಯಧನ/ಗೌರವಧನ ಮುಂತಾದವುಗಳನ್ನು ಖಜಾನೆಯ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ. ಮುಖಾಂತರ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡುವ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಇ 47 ಟಿಎಆರ್ 2014 ದಿ:22-12-2014
2) ಸರ್ಕಾರದ ಆದೇಶ ಸಂಖ್ಯೆ:ಆಇ18 ಟಿ.ಎ ಆರ್ 2015, ದಿನಾಂಕ:1.7.2015.

*****

ಪ್ರಸ್ತಾವನೆ:

ಸಹಾಯಧನ, ಪ್ರೋತ್ಸಾಹಧನ, ಗೌರವಧನ, ವಿದ್ಯಾರ್ಥಿವೇತನ ಮುಂತಾದವುಗಳ ಪಾವತಿಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಹಾಗೂ ಲೆಕ್ಕ ಪತ್ರಗಳ ಗುಣಮಟ್ಟವನ್ನು ಹೆಚ್ಚಿಸಿ, ಸಂಭವನೀಯ ಹಣ ದುರುಪಯೋಗವನ್ನು ತಡೆಯಲು ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಸಹಾಯಧನ, ಪ್ರೋತ್ಸಾಹಧನ,ಗೌರವಧನ ಮುಂತಾದುವುಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ಮುಖಾಂತರ ಜಮೆ ಮಾಡುವುದನ್ನು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿಗೆ ಮಾತ್ರ ಅನ್ವಯಿಸಿ ಜಾರಿಗೆ ತರಲಾಯಿತು.

2. ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಫಲಾನುಭವಿಗಳ ಖಾತೆಗೆ ನೇರ ಜಮೆ ಮಾಡಲು ಖಜಾನೆಗೆ ಬಿಲ್ಲಿನ ಜೊತೆಗೆ ಸಲ್ಲಿಸುವ ಫಲಾನುಭವಿಗಳ ಹೆಸರು, ಮಂಜೂರಾದ ಮೊತ್ತ, ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್, ಮುಂತಾದ ವಿವರಗಳ ಪಟ್ಟಿಯನ್ನು 'pre-voucher' ಎಂದು ಪರಿಗಣಿಸಲು ಆದೇಶಿಸಿದೆ.

3. ಮೇಲೆ (1) ರ ಆದೇಶದಲ್ಲಿ ವಿವರಿಸಿರುವಂತೆ ಫಲಾನುಭವಿಗಳಿಗೆ ಎನ್.ಇ.ಎಫ್.ಟಿ ಮೂಲಕ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮೆ ಮಾಡುವ ವಿಧಾನವನ್ನು ಇತರ ಎಲ್ಲಾ ಜಿಲ್ಲಾ ಖಜಾನೆಗಳಲ್ಲೂ ಜಾರಿಗೆ ತರುವ ಸಲುವಾಗಿ ಈ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 53 ಟಿಎಆರ್ 2015
## ಬೆಂಗಳೂರು, ದಿನಾಂಕ: 15 ನೇ ಫೆಬ್ರುವರಿ 2016

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 1(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯದ ಎಲ್ಲಾ ಜಿಲ್ಲಾ ಖಜಾನೆಗಳ ಮೂಲಕ ಸರ್ಕಾರದ ವಿವಿಧ ಇಲಾಖೆಗಳು ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಫಲಾನುಭವಿಗಳಿಗೆ NEFT ಮುಖಾಂತರ ನೇರವಾಗಿ ಪಾವತಿಸುವ ಸಹಾಯಧನ/ಪ್ರೋತ್ಸಾಹಧನ/ಗೌರವಧನ/ವಿದ್ಯಾರ್ಥಿ ವೇತನ ಮುಂತಾದವುಗಳನ್ನು ಈ ಕೆಳಕಂಡ ವಿಧಾನಗಳನ್ನು ಅನುಸರಿಸಿ ವಿತರಿಸಲು ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿ ಹಾಗೂ ಖಜಾನೆ ಅಧಿಕಾರಿಗಳಿಗೆ ಆದೇಶಿಸಿದೆ.

1. ಹಣ ಸೆಳೆಯುವ ಅಧಿಕಾರಿಯು ಫಲಾನುಭವಿಗಳ ಹೆಸರು, ಮಂಜೂರಾದ/ಪಾವತಿಸಬೇಕಾದ ಮೊತ್ತ, ಬ್ಯಾಂಕಿನ ಐ.ಎಫ್.ಎಸ್.ಸಿ. ಸಂಕೇತ, ಫಲಾನುಭವಿಗಳ ಬ್ಯಾಂಕ್ ಖಾತೆ ಸಂಖ್ಯೆ ಈ ವಿವರಗಳನ್ನು TEXT File(.txt-file) ನಲ್ಲಿ (which will be called as NEFT mandate from now on wards) ನಮೂದಿಸಿ Soft copy ಯನ್ನು ಖಜಾನೆಯ ಅಧಿಕೃತ ಇ-ಮೇಲ್‌ಗೆ ಹಾಗೂ ಮುದ್ರಿಸಿ ಸಹಿ ಮಾಡಿದ Hard copy ವಿವರಗಳ 2 ಪ್ರತಿಗಳನ್ನು ಸವಿವರ ಸಾದಿಲ್ವಾರು ಬಿಲ್ಲಿನೊಂದಿಗೆ ಒಂದೇ ದಿನ ಸಂಬಂಧಿಸಿದ ಖಜಾನೆಗೆ ಸಲ್ಲಿಸುವುದು. ಎಲ್ಲಾ ಜಿಲ್ಲಾ ಖಜಾನೆಗಳ ಅಧಿಕೃತ ಇ-ಮೇಲ್ ವಿಳಾಸವನ್ನು ಹಾಗೂ TEXT File ನಲ್ಲಿ ಸಿದ್ಧಪಡಿಸಲು ಅವಶ್ಯವಾದ Software Utility ಯನ್ನು ಎಲ್ಲಾ ಹಣಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು ಖಜಾನೆಯ ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಖಜಾನೆಗೆ ಸಲ್ಲಿಸಿದ ದಿನವನ್ನು Transacion ದಿನವೆಂದು (T ದಿನ)ಪರಿಗಣಿಸತಕ್ಕದ್ದು.

2. ಸಾದಿಲ್ವಾರು ಬಿಲ್ಲಿನೊಂದಿಗೆ ಸಲ್ಲಿಸುವ ಫಲಾನುಭವಿಗಳ ವಿವರ ಒಳಗೊಂಡ ಪಟ್ಟಿಯನ್ನು Pre-voucher ಎಂದು ಪರಿಗಣಿಸತಕ್ಕದ್ದು.

3. ಹಣಸೆಳೆಯುವ ಅಧಿಕಾರಿಯು ಸಂಬಂಧಿಸಿದ ಖಜಾನೆ ಅಧಿಕಾರಿಯ ಬಳಿ ಕಛೇರಿಯ ಅಧಿಕೃತ ಇ-ಮೇಲ್ ವಿವರವನ್ನು ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ. NEFT Mandate ಅನ್ನು ಖಜಾನೆ ಅಧಿಕಾರಿಗೆ ನೋಂದಾಯಿಸಿದ ಇ- ಮೇಲ್ ಮೂಲಕ ಕಳುಹಿಸಿದಲ್ಲಿ ಮಾತ್ರವೇ ಖಜಾನೆಗಳಲ್ಲಿ ಪಾವತಿಗೆ ಪರಿಗಣಿಸಲಾಗುವುದು. ಪೆನ್ ಡ್ರೈವ್, ಸಿ.ಡಿ. ಗಳಲ್ಲಿ ಸಲ್ಲಿಸಿದ NEFT Mandate ಅನ್ನು ಪಾವತಿಗೆ ಪರಿಗಣಿಸತಕ್ಕದ್ದಲ್ಲ. NEFT Mandate ಅನ್ನು ಸಾದಿಲ್ವಾರು ಬಿಲ್ಲನ್ನು ಖಜಾನೆಗೆ ಸಲ್ಲಿಸುವ ಮೊದಲು ಕಳುಹಿಸುವುದು. ಖಜಾನೆಗಳಲ್ಲಿ ನೋಂದಾಯಿಸಿದ ಇ-ಮೇಲ್ ವಿವರಗಳ ಪ್ರತ್ಯೇಕ ವಹಿಯನ್ನು ನಿರ್ವಹಿಸುವುದು.

4. ಸಂಬಂಧಪಟ್ಟ ಹಣಸೆಳೆಯುವ ಅಧಿಕಾರಿಯು ಖಜಾನೆಗೆ ಸಾದಿಲ್ವಾರು ಬಿಲ್ಲನ್ನು ಸಲ್ಲಿಸುವ ಮೊದಲು ಫಲಾನುಭವಿಗಳು ಸಂಬಂದಪಟ್ಟ ಬ್ಯಾಂಕ್ ಶಾಖೆಯಲ್ಲಿ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರುವ ಬಗ್ಗೆ ಸಂಬಂಧಪಟ್ಟ ಬ್ಯಾಂಕ್ ಶಾಖಾ ವ್ಯವಸ್ಥಾಪಕರಿಂದ ಫಲಾನುಭವಿಗಳ ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಸಂಕೇತ ಮುಂತಾದ ಸಂಪೂರ್ಣ ಮಾಹಿತಿಯನ್ನು ದೃಢೀಕರಿಸಿ ಪಡೆದುಕೊಳ್ಳುವುದು. ಫಲಾನುಭವಿಗಳ ಗುರುತು (Identity), ಫಲಾನುಭವಿಗಳ ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಸಂಕೇತದ ವಿವರಗಳು ಹಾಗೂ ಮಂಜೂರಾದ ಮೊತ್ತದ ಬಗ್ಗೆ ದೃಢಪಡಿಸಿಕೊಳ್ಳುವ ಜವಾಬ್ದಾರಿಯು ಹಣ ಸೆಳೆಯುವ ಅಧಿಕಾರಿಯದ್ದೇ ಆಗಿರುತ್ತದೆ.

5. NEFT Mandate ಅನ್ನು ಕೆಳಗಿನ ಎರಡು ವಿಧಾನದಲ್ಲಿ ಸಿದ್ಧಪಡಿಸಬಹುದಾಗಿರುತ್ತದೆ.

   (i) ಹಣಸೆಳೆಯುವ ಅಧಿಕಾರಿಯು ಖಜಾನೆ ಇಲಾಖೆಯಿಂದ ಈಗಾಗಲೇ ಸಿದ್ಧವಿರುವ NEFT Mandate ತಂತ್ರಾಂಶವನ್ನು ಪಡೆದು, ವಿವರಗಳನ್ನು ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಮಾಡಿ, ಖಜಾನೆಗೆ ಸಾಫ್ಟ್ ಪ್ರತಿಯನ್ನು ನೋಂದಾಯಿಸಿದ ಇ-ಮೇಲ್ ಮೂಲಕ ಕಳುಹಿಸುವುದು.

ಅಥವಾ

(ii) ಹಣಸೆಳೆಯುವ ಅಧಿಕಾರಿಯ ಬಳಿ Excel format ನಲ್ಲಿ ವಿವರಗಳು ಲಭ್ಯವಿದ್ದರೆ, ಸದರಿ ವಿವರಗಳನ್ನು ಖಜಾನೆಯಿಂದ ಒದಗಿಸಲಾಗುವ software utility ಮೂಲಕ text file ಗೆ ಪರಿವರ್ತಿಸಿ, ಖಜಾನೆಯಲ್ಲಿ ನೋಂದಾಯಿಸಿದ ಅಧಿಕೃತ ಇ-ಮೇಲ್ ಮುಖಾಂತರ ಸಲ್ಲಿಸುವುದು.

6. ಖಜಾನೆ ಇಲಾಖೆಯು ಸದರಿ **NEFT** ಪಾವತಿಗಳನ್ನು ಮಾಡಲು ಪ್ರತ್ಯೇಕ encryption ತಂತ್ರಾಂಶವನ್ನು ಸಿದ್ಧಪಡಿಸಿದ್ದು, ಹಣ ಸೆಳೆಯುವ ಅಧಿಕಾರಿಗಳು ನೀಡುವ Text File ನ ವಿವರಗಳನ್ನು ಸದರಿ ತಂತ್ರಾಂಶದಲ್ಲಿ encrypt ಮಾಡಿ ಇ-ಮೇಲ್ ಮೂಲಕ ಏಜೆನ್ಸಿ ಬ್ಯಾಂಕಿಗೆ ತಿಳಿಸಲಾಗುತ್ತದೆ. ನಂತರ ಸಂಬಂಧಿಸಿದ ಖಜಾನೆಯಿಂದ ನೀಡಲಾಗುವ encrypted NEFT file ನ್ನು decrypt ಮಾಡಲು ಏಜೆನ್ಸಿ ಬ್ಯಾಂಕುಗಳಿಗೆ decryption ತಂತ್ರಾಂಶವನ್ನು ಸಹ ಒದಗಿಸಲಾಗುವುದು.

7. ಸಂಬಂಧಪಟ್ಟ ಖಜಾನೆಯು ಸಾದಿಲ್ವಾರು ಬಿಲ್ಲಿನಲ್ಲಿರುವ ಒಟ್ಟು ಮೊತ್ತಕ್ಕೆ ಏಜೆನ್ಸಿ "ಬ್ಯಾಂಕ್ ವ್ಯವಸ್ಥಾಪಕರಿಗೆ RTGS/NEFT ಪಾವತಿಗಾಗಿ" ಎಂದು ಧನಾದೇಶವನ್ನು ನೀಡುವುದು. ಧನಾದೇಶವನ್ನು ಏಜೆನ್ಸಿ ಬ್ಯಾಂಕ್‌ಗೆ ನೇರವಾಗಿ T+2 ದಿನಗಳ ಒಳಗಾಗಿ ಖಜಾನೆಗಳೇ ತಲುಪಿಸುವುದಲ್ಲದೆ NEFT Mandate ಅನ್ನು ಏಜೆನ್ಸಿ ಬ್ಯಾಂಕ್‌ಗೆ ಇ-ಮೇಲ್ ಮೂಲಕ ಸಹ T+2 ದಿನಗಳೊಳಗೆ ಕಳುಹಿಸುವ ಜವಾಬ್ದಾರಿ ಖಜಾನಾಧಿಕಾರಿಯವರದೇ ಆಗಿರುತ್ತದೆ.

8. ಏಜೆನ್ಸಿ ಬ್ಯಾಂಕ್ ಹೆಸರಿಗೆ ನೀಡಲಾದ ಧನಾದೇಶವನ್ನು ಮೇಲಿನ ಕಂಡಿಕೆ ಒಂದರಲ್ಲಿ ತಿಳಿಸಲಾದ ವಿವರಗಳು ಹಾಗೂ NEFT Mandate Form ನೊಂದಿಗೆ ಖಜಾನೆಗಳು ಏಜೆನ್ಸಿ ಬ್ಯಾಂಕ್‌ಗೆ ಸಲ್ಲಿಸಿದ ನಂತರ ಏಜೆನ್ಸಿ ಬ್ಯಾಂಕುಗಳು, ಇ-ಮೇಲ್ ಮುಖಾಂತರ ಖಜಾನೆಯಿಂದ ಪಡೆದ NEFT Mandate ಅನುಬಂಧದಲ್ಲಿ ತೋರಿಸಿರುವ ಫಲಾನುಭವಿಗಳ ಖಾತೆಗೆ ನೇರವಾಗಿ NEFT ಮುಖಾಂತರ T+3 ದಿನಗಳ ಒಳಗಾಗಿ ಮೊತ್ತವನ್ನು ವರ್ಗಾವಣೆ ಮಾಡುವುದು.

9. ಮೇಲಿನ ಕಂಡಿಕೆ 1 ರಿಂದ 6ರ ವರೆಗಿನ ವಿಧಾನಗಳು **ಪಂಚಾಯತ್ ರಾಜ್** ನಿಧಿಗಳಿಗೂ ಅನ್ವಯಿಸುತ್ತದೆ.

10. **ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಫಲಾನುಭವಿಗಳ ಖಾತೆಗಳಿಗೆ ನೇರವಾಗಿ ಹಣ ವರ್ಗಾವಣೆ ಮಾಡಲು:-**

ಫಲಾನುಭವಿಗಳ ಖಾತೆಗೆ ನೇರವಾಗಿ ನಿಧಿ ಖಾತೆಯಿಂದ ಜಮಾ ಮಾಡುವ ಸಲುವಾಗಿ ನಗರ ಸ್ಥಳೀಯ ಸಂಸ್ಥೆಗಳು ಒಂದು ಯೋಜನೆಯಡಿ ಗುರುತಿಸಲಾದ ಫಲಾನುಭವಿಗಳ ಪೈಕಿ ಒಂದು ಸಾದಿಲ್ವಾರು ಬಿಲ್ಲಿನಲ್ಲಿ ಸೇರಿಸಿರುವ ಫಲಾನುಭವಿಗಳಿಗೆ ಪಾವತಿಸಬೇಕಾದ ಒಟ್ಟು ಮೊತ್ತಕ್ಕೆ ಒಂದೇ ಧನಾದೇಶವನ್ನು "ಬ್ಯಾಂಕ್ ವ್ಯವಸ್ಥಾಪಕರಿಗೆ RTGS/NEFT ಪಾವತಿಗಾಗಿ" ಎಂದು ನಮೂದಿಸಿ ಫಲಾನುಭವಿಗಳ ಹೆಸರು, ಪಾವತಿಸಬೇಕಾದ ಮೊತ್ತ, ಬ್ಯಾಂಕಿನ ಖಾತೆ ಸಂಖ್ಯೆ, IFSC ಸಂಕೇತ ಮುಂತಾದ ವಿವರಗಳುಳ್ಳ ಪಟ್ಟಿಯನ್ನು (NEFT Mandate) Soft Copy ಯೊಂದಿಗೆ ಕಂಡಿಕೆ 3 ರಲ್ಲಿರುವ ವಿಧಾನವನ್ನು ಅನುಸರಿಸಿ ಖಜಾನೆಗೆ ಸಲ್ಲಿಸುವುದು. ಮೇಲಿನ ಕಂಡಿಕೆ 2,4 ಮತ್ತು 5ರಲ್ಲಿನ ಸೂಚನೆಗಳು ನಗರ ಸ್ಥಳೀಯ ಸಂಸ್ಥೆಗಳಿಗೂ ಅನ್ವಯವಾಗುತ್ತವೆ. ಸಂಬಂಧಪಟ್ಟ

ಖಜಾನೆಯು ನಗರ ಸ್ಥಳೀಯ ಸಂಸ್ಥೆಗಳು ನೀಡಿದ ವಿವರಗಳನ್ನು encryption ಮಾಡಿ ಚೆಕ್ಕಿನೊಂದಿಗೆ ಏಜೆನ್ಸಿ ಬ್ಯಾಂಕಿಗೆ ಕಳುಹಿಸುವುದು.

11. ಏಜೆನ್ಸಿ ಬ್ಯಾಂಕು ಖಜಾನೆಯಿಂದ ಚೆಕ್ಕನ್ನು ಸ್ವೀಕರಿಸಿದ ನಂತರ ಖಜಾನೆಯು ನೀಡಿರುವ ವಿವರಗಳನ್ನು (Data) decryption ಮಾಡಿ ನಗರ ಸ್ಥಳೀಯ ಸಂಸ್ಥೆಗಳು ತಿಳಿಸಿರುವ ಫಲಾನುಭವಿಗಳ ಖಾತೆಗೆ ಮೊತ್ತವನ್ನು NEFT/RTGS ಮೂಲಕ ವರ್ಗಾವಣೆ ಮಾಡುವುದು.

12. ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗದೆ ಹಿಂದಿರುಗಿಸಲ್ಪಟ್ಟ ಮೊತ್ತಗಳ ಬಗ್ಗೆ:

a) ಏಜೆನ್ಸಿ ಬ್ಯಾಂಕುಗಳು ಪ್ರತಿ ದಿನ ಖಜಾನೆಗೆ ಕಳುಹಿಸುವ ಸ್ಕ್ರೋಲಿನೊಂದಿಗೆ NEFT/RTGS ಪಾವತಿಗಳಿಗೆ ಸಂಬಂಧಿಸಿದಂತೆ ಆಯಾ ದಿನದ ಪಾವತಿಯಾಗದ ಚೆಕ್ಕುಗಳಿಗೆ ಸಂಬಂದಿಸಿದಂತೆ ಟೋಕನ್ ಸಂಖ್ಯೆ, ಡಿ.ಡಿ.ಓ.ಕೋಡ್, ಸದರಿ ಬಿಲ್ಲುಗಳ 12 ಅಂಕಿಗಳ ಲೆಕ್ಕ ಶೀರ್ಷಿಕೆ, ಬ್ಯಾಂಕ್ ಖಾತೆ ಸಂಖ್ಯೆ, ಹಿಂದಿರುಗಿಸಲ್ಪಟ್ಟ ಮೊತ್ತ, ಕಾರಣಗಳ ವಿವರಗಳನ್ನು ಹೊಂದಿರುವ ಪಟ್ಟಿಯನ್ನು ಸಂಬಂಧಪಟ್ಟ ಖಜಾನೆಗೆ ಕಳುಹಿಸುವುದಲ್ಲದೆ, ಆ ರೀತಿ ಹಿಂದಿರುಗಿಸಲ್ಪಟ್ಟ ಒಟ್ಟು ಮೊತ್ತವನ್ನು "Government Suspense '8658-00-102-6-25-NEFT" ಗೆ ಜಮೆ ಮಾಡುವುದು.

b) ಸಂಬಂಧಪಟ್ಟ ಖಜಾನೆ ಅಧಿಕಾರಿಯು ಈ ರೀತಿ ಹಿಂದಿರುಗಿಸಲ್ಪಟ್ಟ ಪಾವತಿಯ ಎಲ್ಲಾ ವಿವರಗಳನ್ನು ಸಂಬಂಧಪಟ್ಟ ಡಿ.ಡಿ.ಓ ಗೆ 5 ಕೆಲಸದ ದಿನಗಳೊಳಗಾಗಿ ಈ-ಮೇಲ್ ಮುಖಾಂತರ ಕಳುಹಿಸಿತಕ್ಕದ್ದು. ಡಿ.ಡಿ.ಓ ರವರು ತಪ್ಪುಗಳಿದ್ದಲ್ಲಿ ಸರಿಪಡಿಸಿ, Text file ನಲ್ಲಿ ವಿವರಗಳನ್ನು ನಮೂದಿಸಿ ಪುನ: "8658-00-102-6-25-NEFT" ಲೆಕ್ಕ ಶೀರ್ಷಿಕೆಯಿಂದ ಸಾದಿಲ್ವಾರು ಬಿಲ್ಲಿನಲ್ಲಿ ಹಣ ಸೆಳೆದು ಫಲಾನುಭವಿಗಳ ಖಾತೆಗೆ ಪಾವತಿಸುವ ಕ್ರಮವನ್ನು ನಿರ್ವಹಿಸತಕ್ಕದ್ದು. ಸಂಬಂಧಿಸಿದ ಖಜಾನೆಯಿಂದ ಮಾಹಿತಿ ಸ್ವೀಕೃತವಾದ 3 ತಿಂಗಳೊಳಗೆ ಡಿ.ಡಿ.ಓ ಕ್ರಮ ವಹಿಸದಿದ್ದಲ್ಲಿ "8658-00-102-6-25-NEFT" ಲೆಕ್ಕ ಶೀರ್ಷಿಕೆಯಲ್ಲಿರುವ ಮೊತ್ತವನ್ನು ಹಣ ಬಿಡುಗಡೆಯಾದ ಪ್ರಧಾನ ಲೆಕ್ಕ ಶೀರ್ಷಿಕೆಯ ಉಪ ಶೀರ್ಷಿಕೆ 911-0-01-Recoveries of over payment of current year ಗೆ ಅಥವಾ 911-0-02 Recovery of over payment of earlier years ಗೆ ಯಾವುದು ಅನ್ವಯವಾಗುತ್ತದೋ ಆ ಲೆಕ್ಕ ಶೀರ್ಷಿಕೆಗೆ ಖಜಾನೆ ಅಧಿಕಾರಿಯು ವರ್ಗಾವಣೆ ಮಾಡುವುದು.

13. ರಾಜ್ಯದ ಎಲ್ಲಾ ಹಣ ಸೆಳೆಯುವ ಅಧಿಕಾರಿಗಳು, ಖಜಾನೆ ಅಧಿಕಾರಿಗಳು ಹಾಗೂ ಏಜೆನ್ಸಿ ಬ್ಯಾಂಕಿನ ಅಧಿಕಾರಿಗಳು ಮೇಲ್ಕಂಡ ಜವಾಬ್ದಾರಿಗಳನ್ನು ತಪ್ಪದೇ ನಿರ್ವಹಿಸಲು ಹಾಗೂ ನಿರ್ದೇಶಕರು, ಖಜಾನೆ ಇಲಾಖೆ ಇವರು ಮೇಲುಸ್ತುವಾರಿ ವಹಿಸಲು ಸೂಚಿಸಿದೆ. ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಈ ಆದೇಶದಲ್ಲಿನ ಕಾರ್ಯವಿಧಾನವನ್ನು ಪಾಲಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸಹಾ ತಿಳಿಸಿದೆ.

14. ಈ ಪದ್ಧತಿಯನ್ನು ದಿನಾಂಕ: 15.2.2016 ರಿಂದ ರಾಜ್ಯದ ಎಲ್ಲಾ ಜಿಲ್ಲಾ ಖಜಾನೆಗಳಲ್ಲಿ ಜಾರಿಗೆ ತರಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/2/16
(ಹೆಚ್.ಎ.ಶೋಬ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ(ಆನಿ ಮತ್ತು ಬಿಸಿಸಿ)

ಇವರಿಗೆ,

1. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.
2. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369. ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪಟ್ಟಿಗೆ 5329/5369, ಕರ್ನಾಟಕ, ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪಟ್ಟಿಗೆ 5329/5369, ಕರ್ನಾಟಕ, ಬೆಂಗಳೂರು.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
9. ಎಲ್ಲಾ ಜಿಲ್ಲಾ ಖಜಾನೆಗಳಿಗೆ- ಖಜಾನೆ ನಿರ್ದೇಶಕರ ಮೂಲಕ
10. ಎಲ್ಲಾ ಏಜೆನ್ಸಿ ಬ್ಯಾಂಕುಗಳಿಗೆ- ಆಯಾ ಜಿಲ್ಲಾ ಖಜಾನೆಗಳ ಮೂಲಕ
11. ಬಿಡಿ ಪ್ರತಿ / ಶಾ.ರ.ಕ